ಆ) ಇಲ್ಲ

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಬೆಳಗಾಂ ಜಿಲ್ಲೆಯಲ್ಲಿ ಬಿ.ಸಿ.ಎಂ. ಹಾಸ್ಟಲ್ ಪ್ರಾರಂಭಿಸುವ ಬಗ್ಗೆ

2514 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದಲ್ಲಿ ಬಿ.ಸಿ.ಎಂ. ಪೋಸ್ಟ್ ಮೆಟ್ರಿಕ್ಯುಲೇಟ್ ಹಾಸ್ಟಲ್ ಪ್ರಾರಂಭಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಸರ್ಕಾರದವರು ಅಲ್ಲಿ ಪೋಸ್ಟ್ ಮೆಟ್ರಿಕ್ಯುಲೇಟ್ ಬಿ.ಸಿ.ಎಂ ಹಾಸ್ಟಲ್ ಪ್ರಾರಂಭಿಸಲು ಕೈಗೊಂಡಿರುವ ಕ್ರಮವೇನು?

ಇ) ದೊಡ್ಡವಾಡ ಭಾಗವು ಅತಿ ಹಿಂದುಳಿದ ಪ್ರದೇಶವಿದ್ದು ಅಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಇದ್ದು ಈ ಕಾಲೇಜಿನಲ್ಲಿ ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸಾಕೌರ್ಯ ಇಲ್ಲದೇ ಇರುವುದರಿಂದ ಹಿಂದುಳಿದ ಗ್ರಾಮದ ಜನರಿಗೆ ಅನಾನುಕೂಲತೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಬೆಳಗಾಂ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆ ಉದ್ದಿಮೆದಾರರಿಗೆ ಸಬ್ಸಿಡಿ

2515 ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯಲ್ಲಿ ಚಿಕ್ಕ ಉದ್ದಿಮೆದಾರರಿಗೆ ಸಬ್ಸಿಡಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ಜಿಲ್ಲೆಯಲ್ಲಿ ಎಷ್ಟು ಜನ ಸಣ್ಣ ಉದ್ದಿಮೆದಾರರಿಗೆ ಸಬ್ಸಿಡಿ ಹಣದ ಬಾಕಿ ಕೊಡಬೇಕಾಗಿದೆ ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೊತ್ತ ಎಷ್ಟು (ಸಂಪೂರ್ಣ ವಿವರ ಹಾಗೂ ಸಬ್ಸಿಡಿ ಬಾಕಿ ಇರುವವರ ಹೆಸರು ಎಷ್ಟು ಹಿಂದಿನ ಬಾಕಿ ಇದೆ ಎಂಬ ಬಗ್ಗೆ ವಿವರಗಳನ್ನೊದಗಿಸುವುದು)

ಇ) ಬೈಲಹೊಂಗಲ ತಾಲ್ಲೂಕಿನಲ್ಲಿ ಸಣ್ಣ ಉದ್ದಿಮೆ ಸ್ಥಾಪಿಸುವವರಿಗೆ ಸಬ್ಸಿಡಿಯನ್ನು ಕೊಡಬೇಕಾಗಿರುವ ಜನರ ಸಂಖ್ಯೆ ಎಷ್ಟು (ಅವರ ಹೆಸರು ಮತ್ತು ಅವರಿಗೆ ಕೊಡಬೇಕಾದ ಸಬ್ಸಿಡಿ ಬಾಕಿಯ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು ಮತ್ತು ಎಷ್ಟು ದಿನಗಳಿಂದ ಬಾಕಿ ಇರುವ ಬಗ್ಗೆ ವಿವರವನ್ನೊದಗಿಸುವುದು)

ಈ) ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟೆಷ್ಟು ಹಣ ಸಬ್ಸಿಡಿಯನ್ನು ಕೊಡಬೇಕಾಗಿರುವುದು ಪ್ರತಿಯೊಂದು ಜಿಲ್ಲೆಯ ವಿವರಗಳನ್ನು ನೀಡುವುದು?

ಉ) ಇಂತಹವರಿಗೆ ಎಷ್ಟು ದಿನಗಳಿಂದ ಹಣವನ್ನು ಕೊಡದೇ ಬಾಕಿ ಉಳಿದಿದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಬಂದಿದೆ.